**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.**

| ಸಿ.ಸಿ.ನಂ. 701/2024 | | | |
|---|---|---|---|
| ಸಾಕ್ಷಿದಾರರ ಹೆಸರು | ಪಿ ರಮೇಶ್ | | |
| ಗಂಡಃತಂದೆಃಹೆಸರು | ವೆಂಕಟರವಣಪ್ಪ | ಪಿಡಬ್ಲ್ಯೂಃ | 2 |
| ವಯಸ್ಸುಃ | 59 ವರ್ಷ | ಸಿಡಬ್ಲ್ಯೂಃ | 14 |
| ಉದ್ಯೋಗಃ | ಪಿ ಎಸ್ ಐ | | |
| ವಾಸ ಸ್ಥಳಃ | ಚಿಂತಾಮಣಿ | | |

**ದಿನಾಂಕಃ 15-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ-**

06.02.2022 ರಿಂದ ಇಲ್ಲಿಯವರೆಗೂ ಚಿಂತಾಮಣಿ ನಗರ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 17.10.2023 ರರಂದು ಮಧ್ಯಹ್ನ 12.30 ಗಂಟೆಗೆ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ದೂರನ್ನು ನೀಡಿದ್ದು ಠಾಣಾ ಮೊ. ಸಂ. 197/2023 ಕಲಂ 143, 498(ಎ) 323, 503, 506 R/w 149 ಐ ಪಿ ಸಿ 3 ಮತ್ತು 4 ಡಿ ಪಿ , ಆಕ್ಟ್‌ರ್ ರೀತ್ಯ ಪ್ರಕರಣ ದಾಖ್ಲಲಿಸಿ ಘನ ನ್ಯಾಯಾಲಯಕ್ಕೆ ನೀವೆಧಸಿಕೊಂಡಿರುತ್ತೇನೆ.

ದಿಃ 18.10.2023 ರಂದು ಚಿಂತಾಮಣಿ ನಗರದ ವೆಂಕಟಗಿರಿಕೊಟೆಯ ನಾರಾಯಣಸ್ವಾಮಿ ಮನೆ ಮುಂದೆ ಪಿರ್ಯಾದಿ ಸುಶ್ಮಿತಾ ದೇವರಾಜ ಮುರಳಿ ರವರು ನನ್ನನ್ನು ಸ್ಥಳಕ್ಕೆ ಬರಮಾಡಿಕೊಂಡು ಸ್ಥಳದ ಮಹಜರ್ ಜರುಗಿಸುವಂತೆ ಸ್ಥಳಕ್ಕೆ ಚಕ್ಕುಬಂದಿ ಪೂರ್ವಕ್ಕೆ ವೆಂಕಟಗಿರಿಕೋಟಿ ಕಾಲೋನಿ, ಪಶ್ಚಿಮಕ್ಕೆ ವೆಂಕಟಗಿರಿಗೆ ಕೊಟೆಗೆ ಹೋಗುವ ರಸ್ತೆ , ಉತ್ತರಕ್ಕೆ ರಸ್ತೆ,

ದಕ್ಷಿಣಕ್ಕೆ ನಾರಾಯಣಸ್ವಾಮಿ ರವರ ಮನೆ. ಸದರಿ ಮಹಜರ್ ಅನ್ನು 10 ರಿಂದ 11 ಗಂಟೆಗೆ ಯವರೆಗೂ ಬರೆದು ಮುಗಿಸಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳದ ಕಚ್ಚಾ ನಕ್ಷೆಯನ್ನು ತಯಾರು ಮಾಡಿರುತ್ತೇನೆ . ಹೆಚ್ಚಿನ ತನಿಖೆ ಗಾಗಿ ಪಿ ಎಸ್ ಐ ರವರಿಗೆ ನೀಡಿರುತ್ತೇನೆ. ದೂರನ್ನು ಈಗಾಗಲೇ ನಿಪಿ1 ಎಂದು ಗುರುತಿಸಲಾಗಿದೆ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಂತು. ಪಂಚನಾಮೆಯನ್ನು ನಿ ಪಿ 2 ಎಂದು ಗುರತಿಸತಲಾಗಿದೆ ಸಾಕ್ಷಿಯ ಸಹಿಯನ್ನು ನಿಪಿ-2 (ಬಿ) ಎಂದು ಗುರುತಿಸಲಾಯಿತ. ಪ್ರ ವ ವರದಿಯನ್ನು ನಿಪಿ 6 ಮತ್ತು ಸಾಕ್ಷಿಯ ಸಹಿಯನ್ನು ನಿ6-(ಎ) ಎಂದು ಮತ್ತು ಕಚಾ ನಕಾಶೆಯನ್ನು ನಿಪಿ 7 ಮತ್ತು ಸಹಿಯನ್ನು ನಿಪಿ-7(ಎ). ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎನ್ ಎಂ ಎಸ್ ಆರೋಪಿ ಪರ ವಕೀಲರಿಂದಃ-</u>**

ಸಾಕ್ಷಿಗಳ ಸಮಕ್ಷಮ ಮಹಜರ್ ಕ್ರಮ ವನ್ನು ಸರಿಯಾರಿ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನೀವು ತಯಾರು ಮಾಡಿರುವ ಕಚ್ಚಾ ನಕ್ಷೆ ಯನ್ನು ಠಾಣೆಯಲ್ಲಿ ಬಣಾವಟ್ಟು ಮಾಡಿರುತ್ತೀರಿ ಎಂದರೆ ಸರಿಯಲ್ಲ. ಪಿರ್ಯಾದುದಾರರ ಮಾತುಕೊಂಡು ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)** **ಓ ಹೇ ಕೇ ಸ ಇದೆ.**

**Sd/-**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.